ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ ಯಾದಗಿರಿ.

ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ
ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,

ಸಿ.ಸಿ. ನಂಃ **850/2017**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೋಲಿಸ ಠಾಣೆ

**// ವಿರುದ್ಧ //**

ಆರೋಪಿ ಃ ನಿತ್ಯಾನಂದ ಮತ್ತು ಇತರರು

ದೋಷಾರೋಪಣೆ

| | |
|---|---|
| ಆರೋಪಿತರು. 1. | ನಿತ್ಯಾನಂದ ತಂದೆ ಸಿದ್ದಲಿಂಗಪ್ಪ ಮಲ್ಲಪ್ಪಗೋಳ, ವಃ 33 ವರ್ಷ, ಸಾಃ ಕೊಂಕಲ್ ತಾಃ ಜಿಃ ಯಾದಗಿರಿ |
| 2. | ನರಸಮ್ಮ ಗಂಡ ಸಿದ್ದಲಿಂಗಪ್ಪ ಮಲ್ಲಪ್ಪಗೋಳ, ವಃ 55 ವರ್ಷ, ಸಾಃ ಕೊಂಕಲ್ ತಾಃ ಜಿಃ ಯಾದಗಿರಿ |
| 3. | ರಮೇಶ ತಂದೆ ಸಿದ್ದಲಿಂಗಪ್ಪ ಮಲ್ಲಪ್ಪಗೋಳ, ವಃ 36 ವರ್ಷ, ಸಾಃ ಕೊಂಕಲ್ ತಾಃ ಜಿಃ ಯಾದಗಿರಿ |
| 4. | ತಿರುಮಲಮ್ಮ ಗಂಡ ರಮೇಶ ಮಲ್ಲಪ್ಪಗೋಳ, ವಃ 31 ವರ್ಷ, ಸಾಃ ಕೊಂಕಲ್ ತಾಃ ಜಿಃ ಯಾದಗಿರಿ |
| 5. | ಮಲ್ಲಪ್ಪ ತಂದೆ ಬಾಲದಂಡಪ್ಪ ಗಂಟಿ, ವಃ 42 ವರ್ಷ, ಸಾಃ ಹೋನಗೇರಾ ತಾಃ ಜಿಃ ಯಾದಗಿರಿ |
| 6. | ಹಣಮಂತಿ ಗಂಡ ಮಲ್ಲಪ್ಪ ಗಂಟಿ , ವಃ 34 ವರ್ಷ, ಸಾಃ ಹೋನಗೇರಾ ತಾಃ ಜಿಃ ಯಾದಗಿರಿ |
| 7. | ಅನೀತಾ ಗಂಡ ಸಹದೇವಪ್ಪ, ವಃ 34 ವರ್ಷ, ಸಾಃ ಗಣಪೂರ ತಾಃ ಜಿಃ ಯಾದಗಿರಿ |
| 8. | ಸಹದೇವಪ್ಪ ತಂದೆ ಸಾಬಣ್ಣ, ವಃ 37 ವರ್ಷ, ಸಾಃ ಗಣಪೂರ ತಾಃ ಜಿಃ ಯಾದಗಿರಿ |

ಆದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,

ಮೊದಲನೆಯದಾಗಿ ಯಾದಗಿರಿ (ಗ್ರಾ) ಪೋಲಿಸ ಠಾಣೆಯ ಹದ್ದಿಯಲ್ಲಿ ಬರುವ ಮುದ್ನಾಳ ಗ್ರಾಮದಲ್ಲಿ ದಿನಾಂಕಃ 06-07-2015 ರಿಂದ ದಿನಾಂಕಃ 30-07-2015 ರ ಅವಧಿಯಲ್ಲಿ ಆರೋಪಿತರಾದ ನಿವೇಲ್ಲರೂ ಚಾಸಾಃ 1 ರವರಿಗೆ ಹೊಸದಾಗಿ ಜಿಮ್ ತರಬೇತಿ ಕೇಂದ್ರ ತೆಗೆಯಬೇಕು ನಿಮ್ಮ ತಂದೆ-ತಾಯಿಯಿಂದ ಹಣ ತೆಗೆದುಕೊಂಡು ಬಾ ಎಂದು ಹೇಳಿದ್ದರಿಂದ ಚಾಸಾಃ 4 ಮತ್ತು 5 ರವರು 1 ನೇ ಆರೋಪಿಗೆ 2 ಲಕ್ಷ ರೂ. ಹಣವನ್ನು ಕೊಟ್ಟಿದ್ದು ಪುನಃ 1 ರಿಂದ 8 ನೇ ಆರೋಪಿತರು ಚಾಸಾಃ 1 ರವರಿಗೆ ಜಿಮ್ ತರಬೇತಿ ಕೇಂದ್ರ ತೆಗೆಯಲು ಹಣ ಸಾಕಾಗುವುದಿಲ್ಲ ಇನ್ನು 3 ಲಕ್ಷ ರೂ. ಹಣ ತೆಗೆದುಕೊಂಡು ಬಾ ಇಲ್ಲವಾದರೆ ನೀನು ನಮ್ಮ ಮನೆಯ ಹತ್ತಿರ ಬರಬೇಡ ಅಲ್ಲಿ ನಿನ್ನ ತವರು ಮನೆಯಲ್ಲಿಯೇ ಇರು ಅಂತ ಹೇಳಿರುತ್ತಾರೆ.

1 ರಿಂದ 8 ನೇ ಆರೋಪಿತರು ಚಾಸಾಃ 1 ರವರಿಗೆ ಮುದ್ನಾಳ ಗ್ರಾಮಕ್ಕೆ ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತಾರೆ. ಪದೇ - ಪದೇ ಮುದ್ನಾಳ ಗ್ರಾಮಕ್ಕೆ ಬಂದು ಚಾಸಾಃ 1, 4, 5 ಮತ್ತು 6 ರವರೊಂದಿಗೆ ಹಣದ ವಿಷಯವಾಗಿ ಜಗಳ ತೆಗೆದು ಹೊಡೆ-ಬಡೆ ಮಾಡಿದ್ದು, 1, 3, 5 ಮತ್ತು 8 ನೇ ಆರೋಪಿತರಾದ ನೀನು ಚಾಸಾಃ 1 ರವರಿಗೆ ವರದಕ್ಷಿಣೆ ಕಿರುಕುಳ ಕೊಟ್ಟು ಹೊಡೆ-ಬಡೆ ಮಾಡಿದ್ದು, ಹಣ ತರುವವರೆಗೂ ನಿನ್ನನ್ನು ಕರೆದುಕೊಂಡು ಹೋಗುವುದಿಲ್ಲ ಅಂತ ಎಚ್ಚರಿಕೆ ನೀಡಿದ್ದು, 1 ನೇ ಆರೋಪಿಯಾದ ನೀನು 9 ನೇ ಆರೋಪಿಯೊಂದಿಗೆ ಅನೈತಿಕ ಸಂಬಂಧಹೊಂದಿದ್ದು ಅವಳೊಂದಿಗೆ ಮದುವೆಯಾಗುವ ಉದ್ದೇಶದಿಂದ ಚಾಸಾಃ 1 ರವರಿಗೆ ಹೊಡೆಬಡೆ ಮಾಡಿ ಹಣ ತರುವಂತೆ ಕಿರುಕುಳ ಕೊಟ್ಟಿದ್ದು, ಈ ಮೂಲಕ ಭಾ.ದಂ.ಸಂ.ಕಲಂ. 498(ಎ), 3 ಮತ್ತು 4 ಡಿಪಿ ಆಕ್ಟ ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **22-02-2025**
ಸ್ಥಳಃ ಯಾದಗಿರಿ

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು ಯಾದಗಿರಿ.